# ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ದಲಿತ-ಬಂಡಾಯ ಸಾಹಿತ್ಯ

**Lohit .P**
Assistant Professor,
Department of kannada,
Akshara Institute of Management Studies,
Shivamogga ,

ಇದು ಆಧುನಿಕ ಕನ್ನಡ ಸಾಹಿತ್ಯದ ಒಂದು ಮಹತ್ವದ ಘಟ್ಟವಾಗಿದ್ದು, ಇದು ಸುಮಾರು ಒಂದು ನೂರು ವರ್ಷಗಳಿಗೂ ಮಿಗಿಲಾದ ಶ್ರೀಮಂತ ಇತಿಹಾಸವನ್ನು ಹೊಂದಿದೆ. ದಲಿತ-ಬಂಡಾಯ ಎಂಬ ಎರಡು ಸಾಹಿತ್ಯ ಪರಿಕಲ್ಪನೆಗಳ ಮನೋಧರ್ಮವು ವಸ್ತು, ಅನುಭವ, ಸಂವೇದನೆ, ಅಭಿವ್ಯಕ್ತಿ ಕ್ರಮ ಮತ್ತು ಮೌಲ್ಯಗಳು ಎಂಬಿತ್ಯಾದಿಯ ದೃಷ್ಟಿಯಿಂದ ಭಿನ್ನವಾಗಿದ್ದರೂ, ಆಶಯ ಮತ್ತು ಚಾರಿತ್ರಿಕ ದೃಷ್ಟಿಯಿಂದ ಅವುಗಳು ಒಂದಕ್ಕೊಂದು ಪೂರಕ ಸಂಬಂಧವನ್ನು ಸ್ಥಾಪಿಸಿಕೊಂಡಿರುವ ಒಂದು ನಾಣ್ಯದ ಎರಡು ಮುಖಗಳಾಗಿವೆ. ಅಂತೆಯೆ ಅವುಗಳು ಕನ್ನಡ ಸಾಹಿತ್ಯ ಪರಂಪರೆಯ ಹಿನ್ನೆಲೆಯಲ್ಲಿ ಒಂದು ಮಹತ್ವದ ಸ್ಥಾನ ಮಾನವನ್ನು ಹೊಂದಿದ್ದು, ಇಪ್ಪತ್ತನೆಯ ಶತಮಾನದ ಎಪ್ಪತ್ತರ ದಶಕ ಉತ್ತರಾರ್ಧದಲ್ಲಿ ಅಧಿಕೃತವಾಗಿ ಕಾಣಿಸಿಕೊಳ್ಳುವ ಮೂಲಕ ಇಡೀ ಕನ್ನಡ ಸಾಹಿತ್ಯಕ್ಕೊಂದು ಹೊಸ ತಿರುವನ್ನು ಕೊಟ್ಟಿತು.

ಅಂತೆಯೆ ಈ ಸಾಹಿತ್ಯ ಪಂಥಗಳ ನಿಮರ್ಾಣಗೊಳ್ಳುವುದಕ್ಕೆ ಮತ್ತು ಚಾಲನೆಗೊಳ್ಳುವುದಕ್ಕೆ ಆಯಾ ಕಾಲದ ಸಾಮಾಜಿಕ ಪರಿಸ್ಥಿತಿಯೂ ಕಾರಣ. ನವೋದಯ ಸಾಹಿತ್ಯ ಚಲಾವಣೆಯಲ್ಲಿದ್ದಾಗ ನಮ್ಮ ದೇಶ ಪಾರತಂತ್ರ್ಯದಲ್ಲಿತ್ತು. ಹಾಗಾಗಿ ದೇಶಕ್ಕೆ ಸ್ವಾತಂತ್ರ್ಯವಿಲ್ಲದಿದ್ದಾಗ ವ್ಯಕ್ತಿ ಸ್ವಾತಂತ್ರ್ಯ ಬಗ್ಗೆ ಆಲೋಚಿಸುವುದು ಯಾವ ಸಾಹಿತಿಗೂ ಸಾಧ್ಯವೇ ಇರದ ಮಾತಾಗಿತ್ತು. ಪ್ರಗತಿಶೀಲ ಚಳವಳಿಯ ಕಾಲಕ್ಕೆ ದೇಶದಲ್ಲಿದ್ದ ಶೋಷಣೆ, ಸಾಮಾಜಿಕ ತಾರತಮ್ಯ, ಆಥರ್ಿಕ ಅಸಮಾನತೆ, ಸಾಮಾಜಿಕ ಅನ್ಯಾಯ, ಸ್ತ್ರೀ ಶೋಷಣೆ, ಬಡವರು ಮತ್ತು ರೈತರ ಮೇಲಿನ ದಬ್ಬಾಳಿಕೆ ಎಂಬಿತ್ಯಾದಿಗಳು ಸಾಹಿತಿಗಳ ತಲೆಕೆಡಿಸತೊಡಗಿದ್ದವು. ಹಾಗೆ ತಲೆಕೆಡಿಸಿಕೊಂಡವರಿಗೆ ಸಹಜವಾದ ಅಬ್ಬರ, ಆವೇಶ, ಪ್ರತಿ ಘಟನೆಗಳು ನೇರವಾಗಿ ಸಾಹಿತ್ಯವನ್ನು ಪ್ರವೇಶಿಸಿದವು. ಆದರೆ ನವ್ಯ ಸಾಹಿತ್ಯ ಚಳುವಳಿ ಆರಂಭವಾಗುವ ಕಾಲಕ್ಕೆ ದೇಶಕ್ಕೆ ಸ್ವಾತಂತ್ರ್ಯ ಬಂದಿತ್ತು. ಶತಮಾನಗಳ ದಾಸ್ಯದ ನೊಗವನ್ನು ಕಳಚಿಕೊಂಡಿದ್ದ ದೇಶದ ಜನ ಹೊಸ ಬಗೆಯ ಬದುಕನ್ನು ಕಾಣುವ ಸಂಭ್ರಮದಲ್ಲಿದದ್ದು ಮಾತ್ರವಲ್ಲದೆ ಸಾಹಿತ್ಯದ ರುಚಿಯನ್ನು ಅನುಭವಿಸ ಹತ್ತಿದ್ದರು. ಆ ಸ್ವಾತಂತ್ರ್ಯ ಸಾಹಿತ್ಯ ಪ್ರಪಂಚಕ್ಕೂ ಪ್ರವೇಶ ಪಡೆಯಿತು. ಹಾಗಾಗಿ ಅನುಭವಗಳನ್ನು ಸ್ವತಂತ್ರ ವ್ಯಕ್ತಿಯ ನಿಜದಲ್ಲಿ ಪರಿಶೀಲಿಸುವ ಪರಿಶೋಧಿಸುವ ಹಂಬಲ ಆಗ ಸಾಹಿತಿಗಿತ್ತು ಎಂಬುದನ್ನು ಅರಿಯಬಹುದು.

ಹಾಗೆಯೆ ಯಾವುದೇ ಸಾಹಿತ್ಯ ಪಂಥವೋ ತನಗಿರುವ ಎಲ್ಲ ಸಾಧ್ಯತೆಗಳನ್ನು ಮುಗಿಸಿಕೊಂಡ ಮೇಲೆ ತನ್ನ ಪ್ರಭಾವವನ್ನು ಕಳೆದುಕೊಳ್ಳುತ್ತಾ ಹೋಗುತ್ತದೆ. ಅಂಥ ಸಂದರ್ಭದಲ್ಲಿ ಆ ಸಾಹಿತ್ಯ ಪಂಥದ ಆರಂಭ ಕಾಲದಲ್ಲಿ ಕಂಡ ಅದರ ಒಳ್ಳೆಯ ಗುಣಗಳೇ ದೌರ್ಬಲ್ಯಗಳಾಗಿ ಕಾಣಲು ಆರಂಭವಗುತ್ತದೆ. ಎಲ್ಲವೂ ಒಂದು ಅತಿಗೆ ಸಂದು ತಾತ್ಸರ, ಟೀಕೆ, ಪ್ರತಿಭಟನೆಗಳು ಆರಂಭವಾಗುತ್ತವೆ. ಇಂಥ ನವ್ಯ ಸಾಹಿತ್ಯಕ್ಕೆ ಎದುರಾದದ್ದು ಇದೇ ಪರಿಸ್ಥಿತಿ. ನವ್ಯ ಸಾಹಿತ್ಯದ ದೌರ್ಬಲ್ಯ ಮತ್ತು ಮಿತಿಗಳನ್ನು ಕುರಿತು ಆವರೆಗೆ ಆ ಪಂಥದಲ್ಲೇ ಗುರುತಿಸಿಕೊಂಡಿದ್ದ ಪೂರ್ಣ ಚಂದ್ರತೇಜಸ್ವಿಯವರು ತಮ್ಮ 'ಅಬಚೂರಿನ ಪೋಷ್ಟಾಫೀಸು' ಕಥಾ ಸಂಕಲನದ ಮುನ್ನುಡಿಯಲ್ಲಿ ಬರೆದ ಮಾತುಗಳು ನವ್ಯ ಸಾಹಿತ್ಯ ಮಿತಿ

ಮತ್ತು ದೌರ್ಬಲ್ಯಗಳನ್ನು ಸಮರ್ಥವಾಗಿ ಹಿಡಿದಿಟ್ಟಿವೆ. ಈ ಬಗೆಯ ಅತೃಪ್ತಿಯೇ 'ದಲಿತ-ಬಂಡಾಯ ಸಾಹಿತ್ಯದ ಆರಂಭಕ್ಕೆ ಪ್ರೇರಣೆಯಾಗಿದ್ದರಿಂದ ತೇಜಸ್ವಿಯವರ ಮಾತುಗಳನ್ನು ನಾವಿಲ್ಲಿ ಉಲ್ಲೇಖಿಸಬಹುದು.

ಇನ್ನು ರಾಷ್ಟ್ರೀಯ ಉತ್ಪಾದನೆಯ ಬಹುಪಾಲನ್ನು ಉಚ್ಛವರ್ಗ ಮತ್ತು ಜಾತಿಗಳೂ, ಮಿಕ್ಕುದ್ದನ್ನು ಮಧ್ಯಂತರ ಮರ್ಗ ಮತ್ತು ಜಾತಿಗಳೂ ತಿಂದು ಹಾಕುತ್ತಿರುವುದರಿಂದ ಸಾಕ್ಷರತೆ ನಿರೀಕ್ಷಿತ ಗತಿಯಲ್ಲಿ ವೃದ್ಧಿಸಿಯೇ ಇಲ್ಲ. ಈ ಕಾರನದಿಂದಲೇ ಭಾರತದ ಗ್ರಾಮಗಳಲ್ಲಿ ಕೇವಲ ಹೆಬ್ಬೆಟೊತ್ತುವ ಪಶು ಸದೃಶ ಸೂದ್ರ ಸಮುದಾಯವೊಂದನ್ನು ನಿಮರ್ಾನ ಮಾಡುತ್ತಿದ್ದೇವೆ. ಸಾಹಿತ್ಯಾಭಿರುಚಿಯನ್ನು ಮೇಲು ಜಾತಿ ಮತ್ತು ವರ್ಗದವರ ಸೊತ್ತಾಗಿಯೇ ಉಳಿಸುವ ಯತ್ನ, ನಮ್ಮ ವಿದ್ಯಾಭ್ಯಾಸದ ಯೋಜನೆಗಳು ಮತ್ತು ವಿದ್ಯಾಭ್ಯಸ ಕ್ರಮ. ಭಾಷೆಯು ಹೇಗೆ ಉಳ್ಳವರ ಸೊತ್ತು ಮಾತ್ರವೇ ಆಗತೊಡಗಿದೆಯೆಂದರೆ ಈಗೆ ಭಾಷೆಯಲ್ಲಿ ಆಲೋಚನೆ ಮತ್ತು ಅನುಭವಗಳ ಅಭಿವ್ಯಕ್ತಿ ಬಯಸುವುದೇ ಮೊಸಗಾರಿಕೆಯಾಗುವ ಹೊತ್ತು ಬರುತ್ತಿವೆ. ಅಂಥದ್ದರಲ್ಲಿ ಸಾಹಿತ್ಯದಲ್ಲೂ ನಾವು ಯಾಂತ್ರಿಕ ಸಾಂಕೇತಿಕತೆಯೊಂದನ್ನು ಸಂಪ್ರದಾಯ ಮಾಡಿಕೊಂಡೂ ಸಹೃದಯ ಸ್ತೋಮವನ್ನು ಸೀಮಿತಗೊಳಿಸಿಕೊಳ್ಳುವುದೇ ಸಾಹಿತ್ಯ ರಚನೆಯ ಉದ್ದೇಶಗಳಲ್ಲಿ ಒಂದನ್ನಾಗಿ ಮಾಡಿಕೊಂಡರೆ ಅದು ರೋಗಗ್ರಸ್ಥ ನಾಗರಿಕತೆಯ ಪರಾಕಷ್ಠೆ ಎಂದಷ್ಟೆ ಹೇಳಬಹುದು ಎಂದು ಗುರುತಿಸಿದ್ದಾರೆ. ಈ ಮಾತುಗಳು ನಿಜಕ್ಕೂ ಅಂದಿನ ಸ್ಥಗಿತ ಬದುಕಿಗೆ ಹಿಡಿದ ಕನ್ನಡಿಯಾಗಿದ್ದು. ಅಂಥ ಬೂರ್ಜ್ವ ಸಾಹಿತ್ಯದಿಂದ ಏನೂ ಪ್ರಯೋಜನವಿಲ್ಲವೆಂದು ನಾವಿಂದು ಮನಗಾಣಬಹುದು. ಈ ನಿಟ್ಟಿನಲ್ಲಿ ಶ್ರೇಣೀಕೃತ ಅತ್ಯಂತ ಕೆಳವರ್ಗದ ಶೂದ್ರ, ಅಸ್ಪೃಶ್ಯ ಮನುಷ್ಯರು ಮೊತ್ತ ಮೊದಲು ಅಕ್ಷರ ಲೋಕವನ್ನು ಪ್ರವೇಶಿಸುವ ಮೂಲಕ ಶತಶತಮಾನಗಳಿಂದಲೂ ತೀವ್ರ ಶೋಷಣೆಗೆ ಒಳಗಾದ ಬದುಕಿಗೆ ನುಡಿಕೊಟ್ಟರು. ಅಂತೆಯೆ ಅದನ್ನು ಸಾಮಾಜಿಕ ಚಳುವಳಿಯ ಒಂದು ಉತ್ಪನ್ನವಾಗಿ ಪಡೆದುಕೊಂಡರೆಂಬುದು ಗಮನಾರ್ಹ.

ದಾಸ ಸಾಹಿತ್ಯದಲ್ಲೂ ಕೂಡಾ ಮನುಷ್ಯನ ಬೂಟಾಟಿಕೆಯನ್ನು ಲೇವಡಿ ಮಾಡುವಲ್ಲಿ ಮೇಲು ಕೀಳುಗಳ ತರತಮ ಭಾವನೆಯನ್ನು ದಿಕ್ಕರಿಸುವಲ್ಲಿ ಜಾತಿ ಕುಲಗಳನ್ನು ಖಂಡಿಸುವಲ್ಲಿ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ. ಸರ್ವಜ್ಞನಂತವರು ಕೆಲವು ತ್ರಿಪದಿಗಳಲ್ಲಿ ತೀವ್ರ ಸಾಮಾಜಿಕ ಪ್ರಜ್ನೆಯನ್ನು ಬಂಡಾಯಗಾರನಂತೆಯೇ ಪ್ರಕಟಪಡಿಸಿದ್ದಾನೆ. ಹಾಗೆಯೆ ಅನಂತರ ಬಂದ ಆಧುನಿಕ ಕನ್ನಡ ಸಾಹಿತ್ಯದ ಕುವೆಂಪು ಅವರು ಕಾವ್ಯ, ಕಾದಂಬರೆ, ನಾಟಕ, ವೈಚಾರಿಕ ಬರೆಹಗಳಲ್ಲಿ ತೀವ್ರ ಶೋಷಣೆಗೊಳಗಾದ ಬದುಕು, ಪರಂಪರೆಯ ಹುಸಿ ಮೌಲ್ಯಗಳ ಬಗೆಗೆ ನುಡಿಕೊಟ್ಟಿದ್ದಾರೆ. ಇವರ ಬಳಿಕ ಪ್ರಗತಿಶೀಲರು ಮಾರ್ಕ್ಸವಾದದ ಬೆಳಕಿನಲ್ಲಿ ಸಾಮಾಜಿಕ ಅಸಮಾನತೆ, ಹಸಿವು, ಬಡತನ, ಬಂಡವಾಳಶಾಹಿ ಮತ್ತು ಪುರೋಹಿತಶಾಹಿಗಳ ದಬ್ಬಾಳಿಕೆ, ಸ್ತ್ರೀಯರ ಶೋಷಣೆಗಲ ಬಗ್ಗೆ ತೀವ್ರವಾಗಿ ವಿರೋದಿಸುವುದನ್ನು ಸೃಜನಾತ್ಮಕವಾಗಿ ನುಡಿಕೊಟ್ಟಿದ್ದಾರೆ. ಆದರೆ ದಲಿತ ಬಂಡಾಯ ಎಂಬೊಂದು ತಾತ್ತ್ವಿಕ ಚೌಕಟ್ಟಿನಿಂದ ಒಂದು ಸಾಹಿತ್ಯ ಪ್ರವೃತ್ತಿ ಆರಂಭವಾದುದು ಮಾತ್ರ ಇತ್ತೀಚೆಗೆ. ಈ ಸಾಹಿತ್ಯ ಚಳವಳಿ ಆರಂಭವಾಗಿ ಇಷ್ಟು ವರ್ಷಗಳು ಕಳೆದ ಮೇಲೂ ಇದನ್ನು ದಲಿತ ಮತ್ತು ಬಂಡಾಯ ಸಾಹಿತ್ಯವೆಂದು ಕರೆಯಬೇಕೋ, ಇಲ್ಲ ದಲಿತ ಸಾಹಿತ, ಬಂಡಾಯ ಸಾಹಿತ್ಯಗಳಿ ಒಂದೆಯೋ ಬೇರೆ ಬೇರೆಯೋ, ದಲಿತ ಸಾಹಿತ್ಯದ ಪರಿಕಲ್ಪನೆಯೊಳಗೇ ಬಂಡಾಯವೂ ಇದೆಯೇ ಅಥವಾ ಬಂಡಾಯದೊಳಗೇ ದಲಿತ ಸಾಹಿತ್ಯವೂ ಸೇರಿಬಿಡುತ್ತದೆಯೋ ಈ ಪ್ರಶ್ನೆಗಳ ಚರ್ಚೆ ಒಂದು ಮುಕ್ತಾಯಕ್ಕೆ ಬಂದಿರುವಂತೆ ತೋರುವುದಿಲ್ಲ.

ದಲಿತರನ್ನ ಅಸ್ಪೃಶ್ಯರು, ಅಂತ್ಯಜರು, ಅಂತ್ಯವಸಯಿದಸ್ಸು, ಅದಮ ಜನಾಂಗ, ತಿರುಕುಲತ್ತರ್, ಪಂಚಮರು, ಭಿಷ್ಕೃತರು, ಆದಿಕನರ್ಾಟಕ, ಅನುಸೂಚಿತ, ಪರಿಶಿಷ್ಟ ಜಾತಿ, ಹರಿಜನ ಎಂದು ಮುಂತಾಗಿ ಕರೆಯುತ್ತಿದ್ದ ಬಗ್ಗೆ

ಇತಿಹಾಸದ ಸಾಕ್ಷಿ ಇದೆ. ಇದರಲ್ಲಿ ಕೆಲವು ಪದಗಳು ವೃತ್ತಿ ಹಾಗೂ ಇರುವಿಕೆಯನ್ನು ಸೂಚಿಸಿದರೆ ಕೆಲವು ಜಾತಿವಾಚಕವಾಗಿ ಜನಾಂಗವಾಚಕವಾಗಿ ಬಳಕೆಯಾಗಿದೆ. ಹರಿಜನ ಎನ್ನುವ ಪದವನ್ನು ಮಹಾತ್ಮ ಗಾಂಧೀಜಿಯವರು ಬಳಕೆಗೆ ತಂದರು ಎಂದು ಹೇಳಲಾಗುತ್ತದೆ. ಆದರೆ, ವಾಸ್ತವವಾಗಿ 17ನೇ ಶತಮಾನದಲ್ಲೇ ಹರಿದಾಸರು ಅಸ್ಪೃಶ್ಯರನ್ನು ಹರಿಜನ ಎಂದು ಕರೆದರು. ಇತಿಹಾಸದಲ್ಲಿ ಹುದುಗಿಹೋಗಿದ್ದ ಈ ಪದವನ್ನು ಮಹಾತ್ಮ ಗಾಂಧೀಜಿಯವರು ಮತ್ತೆ ಬಳಕೆಗೆ ತಂದರು. ಆದರೆ 1973 ರಂದು ಬಿ. ಬಸವಲಿಂಗಪ್ಪನವರು ಕನ್ನಡ ಸಾಹಿತ್ಯ ಬೂಸಾ ಎಂದುದರ ಪರಿಣಾಮವಾಗಿ ದಲಿತರೆಲ್ಲ ಒಂದಾಗಿದ್ದು, ಅಂತೆಯೆ ಈ ಸಂದರ್ಭದಲ್ಲಿ ಸ್ವಾಭಿಮಾನ, ಆತ್ಮಸ್ಥೈರ್ಯತೆಯಿಂದ ಅಸ್ಪೃಶ್ಯರು ತಮ್ಮ ಜಾತಿಯ ಹೆಸರಿನಿಂದಲೇ ಗುರುತಿಸಿಕೊಳ್ಳುವುದನ್ನು ತೋರಿಸಿದರು.

ಅಂತೆಯೆ ಇನ್ನೊಂದು ಮುಖ್ಯ ಪ್ರಶ್ನೆಯೆಂದರೆ ದಲಿತ ಸಾಹಿತ್ಯ ಎಂದರೆ ಯಾವುದು ಎನ್ನುವುದು, ದಲಿತ ಬದುಕನ್ನು ಕುರಿತು ದಲಿತರೇ ಬರೆದದ್ದು ಮಾತ್ರ ದಲಿತ ಸಾಹಿತ್ಯ ಎನ್ನವವಾದ ಒಂದು ಮಗ್ಗುಲಿನಾದರೆ, ದಲಿತರ ಬದುಕನ್ನು ಕುರಿತು ಬೆರಾರೇ ಬರೆದರೂ ಅದು ದಲಿತ ಸಾಹಿತ್ಯವಾಗುತ್ತದೆ ಎಂಬ ವಾದ ಮತ್ತೊಂದು ಮಗ್ಗುಲಲ್ಲಿದೆ. ಈ ದೃಷ್ಟಿಯಿಂದ ಸ್ವಾತಂತ್ರೋತ್ತರ ಕನ್ನಡ ಸಾಹಿತ್ಯದ ಈ ಐವತ್ತು ವರ್ಷಗಳಲ್ಲಿ ತೀವ್ರವಾದ ಏರಿಳಿತಗಳು, ಸಿದ್ಧಾಂತಗಳು ಬಂದೋಗಿವೆ. ನವೋದಯ ಸಾಹಿತ್ಯವು ವಸಾಹತುಶಾಹಿಯ ವಿರುದ್ಧ ಪ್ರತಿಭಟನೆಯನ್ನು ತೋರಿಸಿದ್ದರೆ. ಪ್ರಗತಿಶೀಲ ಸಾಹಿತ್ಯವು ಮಾಕರ್್ಸವಾದದ ಬೆಳಕಿನಲ್ಲಿ ಬಂಡವಾಳಶಾಯಿ ಮತ್ತು ಪಟ್ಟಭದ್ರಾ ಹಿತಾಶಕ್ತಿಗಳ ವಿರುದ್ಧ ಬಂಡೆದ್ದು ಮಧ್ಯಮ ವರ್ಗದ ಕಾಮರ್ಿಕ ಹಿತಾಶಕ್ತಿಗಳು, ದಟ್ಟದರಿದ್ರರ ಹಸಿವು, ನಿರಾಸೆ, ಹತಾಸೆ, ಬವಣೆಗಳು ಮೊದಲಾದವನ್ನು ಕುರಿತು ಬರೆದರು. ಈ ಸಾಹಿತ್ಯ ಚಳುವಳಿಗಳೆಲ್ಲವೂ ಹೆಚ್ಚು ದೂರ ಸಾಗದೆ ಸ್ಥಿತ್ಯಂತರ ಬದುಕಿನೊಂದಿಗೆ ಬದಲಾವಣೆ ಪಡೆದುಕೊಳ್ಳುವ ಮೂಲಕ ಕನ್ನಡ ಸಾಹಿತ್ಯಕ್ಕೆ ಸಾರ್ಥಕ ಕೊಡುಗೆಗಳನ್ನು ಕೊಟ್ಟಿವೆಂಬುದು ನಿವರ್ಿವಾದ. ಅಂತೆಯೆ ಸಮಾಜ ಮತು ಸಾಹಿತ್ಯಗಳ ಸಂಬಂಧಗಳ ದೃಷ್ಟಿಯಿಂದ ಅವುಗಳ ಬಿರುಕನ್ನು ಗಮನಿಸಿದ ದಲಿತ-ಬಂಡಾಯ ಸಾಹಿತ್ಯವು ಮೇಲು ಕೀಳು, ಬಡವ ಶೀಮಂತ, ಸಮಾಜಿಕ ನ್ಯಾಯ, ವರ್ಣ, ವರ್ಗ ಮತ್ತು ಅಸ್ಪೃಶ್ಯ ಶೋಷಣೆ, ಹಸಿವು, ಬದುಕಿನ ಬರ್ಬರ ಬದುಕಿನ ಬಗ್ಗೆ ಒತ್ತು ಕೊಟ್ಟು , ರಾಮಮನೋಹರ ಲೋಹಿಯಾ, ಅಂಬೇಡ್ಕರ್, ಗಾಂಧೀಜಿ, ಮಾವೋ, ಮಾಕರ್್ಸ, ಜ್ಯೋತಿಭಾಪುಲೆ ಮೊದಲಾದವರ ಸೈದ್ಧಾಂತಿಕ ಚಿಂತನೆಯ ಬೆಳಕಿನಲ್ಲಿ ಬದುಕನ್ನು ಹಸನುಗೊಳಿಸುವ ನೆಲೆಗಳಿಗೆ ನುಡಿಕೊಟ್ಟಿತು.

ಸಾಂಸ್ಕೃತಿಕ ಕ್ಷೇತ್ರದಲ್ಲಿ ಅನೇಕ ವರ್ಷಗಳಿಂದ ಕಂಡು ಬರುತ್ತಿರುವ ಪ್ರಗತಿಪರ ಧೋರಣೆಗಳು, ತೆಗೆದುಕೊಂಡ ತಿರುವುಗಳು, ಎದುರಿಸಿದ ಸಮಸ್ಸೆಗಳು ಮತ್ತು ತಲುಪಿದ ನೆಲೆಗಳನ್ನು ಗಮನಿಸಿದಾಗ ಅವುಗಳಿಂದ ಪಾಠ ಕಲಿತ ವ್ಯಾಪಕ ಸ್ವರೂಪದ ಸಂಘಟನೆಯ ಅಗತ್ಯ ಗೊತ್ತಾಗುತ್ತದೆ. ಒಕ್ಕೂಟ ಪ್ರಗತಿ ಪಂಥಗಳ ಸಾಫಲ್ಯಗಳ ವೈಪಲ್ಯಗಳ ದಾಖಲೆ ನಮಗೊಂದು ಎಚ್ಚರದ ಸಂಗತಿಯೂ ಆಗಿದೆ. ನಮ್ಮ ದೇಶದ ಚಾರಿತ್ರಿಕ, ರಾಜಕೀಯ ಬೆಳವಣಿಗೆಗಳ ಸ್ವರೂಪದಿಂದಾಗಿ ಉದ್ಭವಿಸಿದ ಇಂದಿನ ವಿಶಿಷ್ಟ ಸಂದರ್ಭದ ಹಿನ್ನೆಲೆಯಲ್ಲಿ ನಮ್ಮ ಹೋರಾಟದ ನೆಲೆಯನ್ನು ಕಂಡುಕೊಳ್ಳಬೇಕಾಗಿದೆ. ಆನವಿರೋಧಿ ನಿಲವುಗಳು ವಿವಿಧ ಮುಖವಾಡಗಳ ಮರೆಯಲ್ಲಿ ಒಂದಾಗಿ ವಿಜೃಂಭಿಸುತ್ತಿರುವ ಈ ಸಂದರ್ಭ ಪ್ರಗತಿಪರ ಧೋರಣೆಯು ಎಲ್ಲರಿಗೂ ಒಂದು ಸವಾಲು. ಈ ಸವಾಲಿಗೆ ನಮ್ಮ ಉತ್ತರ ಎಲ್ಲ ವಾಮಪಂಥೀಯರ ಸಂಘಟನೆ, ಮತ್ತೂ ಸ್ಪಷ್ಟ ಪಡಿಸುವುದಾದರೆ ಸಮಕಾಲೀನ ಚರಿತ್ರೆಯ ಬೆಳವಣಿಗೆಯ ಸ್ವರೂಪದಿಂದಾಗಿ ಎಲ್ಲ ವಾವು ಪಂಥೀಯರ ಸಾಂಸ್ಕೃತಿಕ ಒಗ್ಗಟ್ಟು ಈಗ ಅತ್ಯಂತ ಮುಖ್ಯವಾದದ್ದು. ಈ ದಿಕ್ಕಿನಲ್ಲಿ ಬಂಡಾಯ ಸಾಹಿತ್ಯ ಚಳವಳಿಯು ಕನ್ನಡ ಸಾಂಸ್ಕೃತಿಕ ಕ್ಷೇತ್ರದಲ್ಲಿ ಅತ್ಯಂತ ವ್ಯಾಪಕವಾಗಿ ಹಬ್ಬುವ

ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು.

ಹಾಗೆಯೇ ಹಿರಿಯ ಕವಿ, ವಿಮರ್ಶಕ ಜಿ.ಎಸ್. ಶಿವರುದ್ರಪ್ಪ ಅವರು ನನ್ನ ಮಟ್ಟಿಗೆ ಹೇಳುವುದಾದರೆ ಬಂಡಾಯ ಎನ್ನುವುದೊಂದು ಮನೋಧರ್ಮ. ಈ ಮನೋಧರ್ಮದ ಮುಖ್ಯ ಲಕ್ಷಣ ಸಾಮಾಜಿಕ ಸಮಾನತೆ ಹಾಗೂ ಅನ್ಯಾಯಗಳನ್ನು ಒಟ್ಟಾರೆಯಾಗಿ ವಸ್ತು ಸ್ಥಿತಿಯನ್ನು ಪ್ರಶ್ನಿಸುವ ಮತ್ತು ಪರಿಸ್ಥಿತಿಯನ್ನು ಬದಲಾಯಿಸುವ ಉದ್ದೇಶದಿಂದ ಪ್ರತಿಭಟಿಸುವ ಒಂದು ಪ್ರವೃತ್ತಿ. ಶತಮಾನಗಳ ಕಾಲ ಅಕ್ಷರ ಜ್ಞಾನದ ಸವಲತ್ತುಗಳಿಂದ ವಂಚಿತರಾಗಿದ್ದು ಮತ್ತು ಮೇಲಿನ ಎಲ್ಲ ವರ್ಗದವರುಗಳಿಂದ ತುಳಿತಕ್ಕೆ ಒಳಗಾಗಿದ್ದ ಸಮಾಜದ ಕೆಳಗಿನ ಸ್ಥರವೊಂದು ಮಾತನಾಡಲು ಕಲಿತು ತನ್ನ ಪ್ರತಿಭಟನೆಯನ್ನು ಅಭಿವ್ಯಕ್ತಿಪಡಿಸತೊಡಗಿದಾಗ ಮೂಡಿ ಬಂದಿತು ಬಂಡಾಯ ಸಾಹಿತ್ಯ ಹಿಂದಿನ ಎಲ್ಲ ಸಾಹಿತ್ಯ ಚಳುವಳಿಗಳೂ ತಮ್ಮ ತಿಕ್ಕೆಗೆ ತೆಗೆದುಕೊಳ್ಳದೆ ಹೋದ ಸಮಾಜದ ಕೆಳವರ್ಗದವರ ಬದುಕನ್ನು, ನಿರ್ಲಕ್ಷಿತರ ಬದುಕನ್ನು ಬಂಡಾಯ ಸಾಹಿತ್ಯ ತನ್ನ ವಸ್ತುವನ್ನಗಿ ಮಾಡೀಕೊಂಡಿದೆ' ಎಂದು ಗುರುತಿಸಿದ್ದಾರೆ. ಅಂದರೆ ಇದು, ವಸ್ತು ಮತ್ತು ಅಭಿವ್ಯಕ್ತಿಯ ದೃಷ್ಟಿಯಿಂದ ಪರಂಪರೆಗಿಂತ ಭಿನ್ನವಾದುದೆಂಬುದು ಗಮನಾರ್ಹ. ಸಾಹಿತ್ಯಕ್ಕೆ ಆಂತರಿಕ ಪ್ರೇರಣೆಗಳು ಎಷ್ಟು ಮುಖ್ಯವೋ ಅಷ್ಟೇ ಬಾಹ್ಯ ಪ್ರೇರಣೆ ಪ್ರಭಾಗಳೂ ಪ್ರಮುಖವಾದವು. ಸಾಹಿತ್ಯ ಸೃಷ್ಟಿಕ್ರಿಯೆ ಅಂತಮರ್ುಖ ಮತ್ತು ಬಹಿಮರ್ುಖ, ಪ್ರಜ್ಞೆ-ಅಪ್ರಜ್ಞೆ ಸಂಘರ್ಷ ಪ್ರಕ್ರಿಯೆಗಳಿಂದ ನಿಮರ್ಿತವಾದುದ್ದಗಿದೆ. ಈ ದೃಷ್ಟಿಯಿಂದ ಸಾಹಿತ್ಯೇತರ ಪ್ರೇರಣೆಗಳು ತುಂಬ ಮಹತ್ವವಾದವೆಂದು ನಾವಿಲ್ಲಿ. ತಿಳಿಯುವುದು ಅವಶ್ಯಕವಾಗಿದೆ. ಅವುಗಳಲ್ಲಿ ಸ್ಥೂಲವಾಗಿ ಎಡಪಂಥೀಯ ಸಿದ್ಧಾಂತಗಳೆಲ್ಲವೂ ದಲಿತ ಬಂಡಾಯ ಸಾಹಿತ್ಯವನ್ನು ಗಾಢ ಪ್ರಭಾವ ಬೀರಿವೆ. ಆ ಮೂಲಕ ಆ ಚಳವಳಿಯ ಪ್ರಮುಖ ಬರಹಗಾರರ ಸೃಜನಶೀಲತೆಗೆ ಪ್ರೇರಣೆ ನೀಡಿವೆ.

ದಲಿತ ಬಂಡಾಯ ಸಾಹಿತ್ಯದ ಒಂದು ಪ್ರೇರಕ ಶಕ್ತಿಯಾಗಿದ್ದು, ಇದು ಸಮಾಜದಲ್ಲಿ ಎರಡು ವರ್ಗಗಳಿವೆ. ಒಂದು ಶ್ರೀಮಂತ ಮತ್ತು ಬಡವ. ಇವರ ಸಂಘರ್ಷ ಸಮಾಜಿಕ, ರಾಜಕೀಯ, ಆಥರ್ಿಕ ಮತ್ತು ಜಾತಿ ದೃಷ್ಟಿಯಿಂದ ಸದಾ ಸಂಭವಿಸುತ್ತಿರುತ್ತದೆ, ಇದರಿಂದ ತೀವ್ರ ಹಿಂಸೆ ಉಂಟಾಗುವುದು. ಈ ಬದಲಾವಣೆ ಆಗಬೇಕೆಂದರೆ ಆಥರ್ಿಕ ಬದಲಾವಣೆಯಿಂದ ಮಾತ್ರ ಸಾಧ್ಯವೆಂದು ಗುರುತಿಸುವನು. ಆದುದರಿಂದ ಈ ಪ್ರೇರಣೆಯು ಹೆಚ್ಚು ಬಂಡಾಯ ಸಾಹಿತ್ಯ ಚಳುವಳಿಗೆ ಆದಷ್ಟು ದಲಿತ ಸಾಹಿತ್ಯ ಸಂವೇದನೆ ತೀವ್ರ ತಟ್ಟಲಿಲ್ಲವೆಂದು ಹೇಳಲಾಗುವುದು. ಈ ಹಿನ್ನೆಲೆಯಲ್ಲಿ ಬರಗೂರು ರಾಮಚಂದ್ರಪ್ಪ, ಬೆಸರಗಹಳ್ಳಿರಾಮಣ್ಣ, ಕುಂವೀ, ಎಸ್.ಎಸ್. ಹಿರೇಮಠ್, ಆರ್.ವಿ. ಭಂಡಾರಿ, ಸಿದ್ಧಲಿಂಗಯ್ಯ ಮೊದಲಾದ ಪ್ರಮುಖ ಕವಿ ಕಥೆಗಾರರು ತೀವ್ರ ಸಂವೇದನೆಯನ್ನು ಪಡೆದುಕೊಳ್ಳುವ ಮೂಲಕ ಉತ್ತಮ ಕೃತಿಗಳನ್ನು ನೀಡೀದ್ದಾರೆ. ಅಂತೆಯೆ ಅವು ಸಾಹಿತ್ಯ ಮತ್ತು ಸಾಮಾಜಿಕ ಸಂದರ್ಭದಲ್ಲಿ ತೀವ್ರ ಎಚ್ಚರವನ್ನುಂಟು ಮಾಡಿವೆಂಬುದು ಗಮನಾರ್ಹ.

ದಲಿತ-ಬಂಡಾಯ ಸಾಹಿತ್ಯಕ್ಕೆ ಪ್ರೇರಣೆ ನೀಡಿದ ಪ್ರಮುಖ ಸಾಹಿತ್ಯೇತ್ತರ ವಾದಗಳಲ್ಲೊಂದು. ಇದು ಸಮಾಜದ ಅಸಮಾನತೆಗೆ ವರ್ಗ, ಜಾತಿ, ಆಥರ್ಿಕತೆ, ಸಾಮಾಜಿಕತೆ ಮತ್ತು ರಾಜಕೀಯ ಕಾರಣಗಳೆಂದು ಗುರುತಿಸಿ, ಅದನ್ನು ತೊಲಗಿಸಲು ಜಾತಿ ವ್ಯವಸ್ಥೆಯನ್ನು ತೊಲಗಿಸಬೇಕೆಂದು ಹೇಳಲಾಗುವುದು. ಅಂದರೆ ಒಬ್ಬ ಅಸ್ಪೃಶ್ಯ ಬಡವನಿಗೂ ಒಬ್ಬ ಮೇಲ್ವರ್ಗದ ಬಡವನಿಗೆ ಆಗುವ ಶೋಷಣೆಯಲ್ಲಿ ವ್ಯತ್ಯಾಸವಿದ್ದು, ಅಸ್ಪೃಶ್ಯನ ಶೋಷಣೆ ಮಾನಸಿಕವಾಗಿ ಕೀಳು ಭಾವನೆಯೂ, ಬಹಿರಂಗವಾಗಿ ಬಡವಾಗಿಯೂ ಅವಮಾನಿತನಾದರೆ; ಒಬ್ಬ ಮೇಲ್ವರ್ಗದ ಬಡವ ಮಾನಸಿಕವಾಗಿ ಜಾತಿಯಿಂದ ಶ್ರೇಷ್ಟವಾಗಿಯೆ ಇದ್ದು, ಬಹಿರಂಗವಾಗಿ ಮಾತ್ರ ಅವಮಾನ ಅನುಭವಿಸುವನೆಂದು ಗುರುತಿಸಲಾಗುವುದು. ಈ ಸಂವೇದನೆಯ ಹಿನ್ನೆಲೆಯಲ್ಲಿ ಚೆನ್ನಣ್ಣ ವಾಲೀಕಾರ, ಬಸವರಾಜಸ ಬರದ, ವಿಷ್ಣು ನಾಯಕ,

ಬೆಸಗರಹಳ್ಳಿ ರಾಮಣ್ಣ, ಇನ್ನು ಮೊದಲಾದ ಪ್ರಮುಖ ಸಾಹಿತಿಗಳು ತುಂಬ ಪ್ರೇರಣೆ ಪಡೆದುಕೊಳ್ಳುವ ಮೂಲಕ ಶ್ರೇಷ್ಠ ಕೃತಿಗಳನ್ನು ನೀಡಿದ್ದಾರೆ. ಅಂತೆಯೆ ಈ ಮೂಲಕ ದಲಿತ ಬಂಡಾಯ ಸಾಹಿತ್ಯ ಸಾಮಾಜಿಕ ಪ್ರಜ್ಞೆ ಮೂಡಿಸುವ ಮೂಲಕ ಜಾತಿ ವಿನಾಶಕ್ಕೆ ಪಣತೊಟ್ಟು, ಮಾನವೀಯ ಪ್ರೇಮ, ಜಾತ್ಯತೀತ ಪ್ರಜ್ಞೆಗಳಿಗೆ ಒತ್ತು ನೀಡಿದೆಂಬುದು ಗಮನಾರ್ಹ.

ಯಾವುದೇ ಸಾಹಿತ್ಯವು ಆಂತರಿಕ ಮತ್ತು ಬಾಹ್ಯ ಪ್ರೇರನೆ ಪ್ರಭಾವಗಳಿಂದ ಬದಲಾವಣೆ, ಹೊಸತನವನ್ನು ಕಂಡುಕೊಳ್ಳುವುದು ಸಹಜ. ಅಂದರೆ ತನ್ನ ಹಿಂದಿನ ಸಾಹಿತ್ಯ ಪರಂಪರೆಯ ಮಿತಿ ಮೇರೆಗಳ ದೃಷ್ಟಿಯಿಂದ ಪ್ರತಿಯೊಂದು ಸಾಹಿತ್ಯವು ಹೊಸ ತಿರುವನ್ನು ಪಡೆದುಕೊಳ್ಳುವ ಜೊತೆಗೆ ಹೊಸ ಅನ್ವೇಷಣೆಗೆ ನಾಂದಿಯಾಗುವುದು. ಅಂತೆಯೆ ಇದು ಯಾವುದೇ ಸಾಹಿತ್ಯದ ಆರೋಗ್ಯಕರ ಲಕ್ಷಣವೆಂದು ಗುರುತಿಸಬಹುದಾಗಿದೆ. ದಲಿತ ಬಂಡಾಯ ಸಾಹಿತ್ಯ ಸೃಷ್ಟಿಯ ಹಿಂದೆ ನವ್ಯ ಸಾಹಿತ್ಯದ ಇತಿ ಮಿತಿಗಳು, ತೆಲುಗಿನ ದಿಗಂಬರ ಕಾವ್ಯ, ಮರಾಠಿ ದಲಿತ ಸಾಹಿತ್ಯ ಚಳುವಳಿ ಮತ್ತು ಆಫ್ರಿಕಾದ ಕಪ್ಪು ಸಾಹಿತ್ಯ ಚಳುವಳಿ ಇನ್ನು ಮೊದಲಾದವು ತುಂಬ ಮಹತ್ವದ ಪಾತ್ರವನ್ನು ವಹಿಸಿರುವುದು ಗಮನಾರ್ಹ. ನವ್ಯ ಸಾಹಿತ್ಯದ ಇತಿ ಮಿತಿಗಳು ದಲಿತ ಬಂಡಾಯ ಸಾಹಿತ್ಯ ಸೃಷ್ಟಿಯ ಹಿಂದ ಒಂದು ಪ್ರಮುಖ ಕಾರಣವೆನ್ನುವುದಕ್ಕಿಂತ ಇಡೀ ಕನ್ನಡ ಸಾಹಿತ್ಯ ಪರಂಪರೆಯೆ ಮಾಡಿದ ತಪ್ಪು ಒಪ್ಪುಗಳೇ ಹೆಚ್ಚು ಜವಾಬ್ದಾರಿಯು ಇದೆಂಬುದನ್ನು ಭಾವಿಸುವುದು ಅವಶ್ಯಕವಾಗಿದೆ. ಅಂದರೆ ಇದು, ಶತ ಶತಮಾನಗಳಿಂದಲೂ ಅಕ್ಷರ ಮತ್ತು ಸಕಲ ಸವಲತ್ತುಗಳಿಂದಲೂ ತೀವ್ರ ವಂಚನೆ ಶೋಷಣೆಗೊಳಗಾದ 20 ನೇ ಶತಮಾನದ ಒಬ್ಬ ಸಾಮಾನ್ಯ ಮನುಷ್ಯನ ಎಚ್ಚೆತ್ತು ಅದನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಸೃಷ್ಟಿಯಾದ ಸಾಹಿತ್ಯವಾಗಿದೆ. ಅಂದರೆ ಅದು ವಚನ ಸಾಹಿತ್ಯವನ್ನು ಹೊರತುಪಡಿಸಿದರೆ, 20ನೇ ಶತಮಾನದಲ್ಲಿ ಬಂದು ಪ್ರಧಾನ ದನಿಯಾಗಿದೆ. ಇದರ ಹಿಂದಿನ ನವೋದಯ ಮತ್ತು ನವ್ಯ ಸಾಹಿತ್ಯಗಳೆರಡೂ ಮಧ್ಯಮ ವರ್ಗದ ಮುಖವಾಣಿಗಳಾಗಿದ್ದು, ಅವು 'ಪ್ರತಿಭಟನೆ' ಯಿಂದ ಜನ್ಮ ತಾಳಿದರೂ ಮೂಲಭೂತ ಬದಲಾವಣೆಯ ಪರವಾಗಿಲ್ಲದ ಪ್ರತಿಗಾಮಿತನಗಳ ವಿರುದ್ಧ ಮೂಡಿದ ಸಾಹಿತ್ಯ ದಲಿತ-ಬಂಡಾಯ ಸಾಹಿತ್ಯವಾಗಿದೆ. ಈ ನಿಟ್ಟಿನಲ್ಲಿ ನವ್ಯ ಸಾಹಿತ್ಯ ಮನುಷ್ಯನ ಆಂತರಿಕ ಮನಸ್ಸಿಗೆ ಹೆಚ್ಚು ಒತ್ತುಕೊಟ್ಟು, ಆತನ ಮಾನಸಿಕ ಯಾತನೆ, ದ್ವಂದ್ವ, ಏಕಾಂಗಿತನ ಪರಕೀಯತೆ ಇನ್ನು ಮೊದಲಾದ ಅಂಶಗಳೇ ಪ್ರಮುಖವಾಗಿದ್ದು ಬಾಹ್ಯದಂತ ಸಾಮಾಜಿಕ ಪ್ರಜ್ಞೆಯಿಂದ ದೂರ ನಿಂತಿತು.

ಅಂತೆಯೆ ಒಂದು ಕಡೆ ಭಾಷೆ, ಸಂಕೇತ, ಪ್ರತಿಮೆಗಳಿಂದ ಪ್ರಗತಿಪರ ಧೋರಣೆಗಳ ಮುಖವಾಡ ಹಾಕಿ, ಇನ್ನೊಂದು ಕಡೆ ಸಾಂಪ್ರದಾಯಿಕತೆಯನ್ನು ಎತ್ತಿಹಿಡಿಯುತ್ತಾ, ಪ್ರಗತಿ ವಿರೋಧಿ ಶಕ್ತಿಗಳೊಂದಿಗೆ ಗುಟ್ಟಾಗಿ ಸಾಮೀಲಾಗಿರುವಂತೆ ಕಾಣುವ ಕನ್ನಡ ನವ್ಯ ಸಾಹಿತ್ಯ ದೌರ್ಬಲ್ಯಗಳಿಂದ ಎಚ್ಚೆತ್ತು ದಲಿತ ಬಂಡಾಯ ಸಾಹಿತ್ಯ ಮಾಕರ್್ಸ, ಲೋಹಿಯಾ, ಅಂಬೇಡ್ಕರ್ ಇನ್ನೂ ಮೊದಲಾದವರ ಚಿಂತನೆಗಳ ಸಂವೇದನೆಯಿಂದ ಶೋಷಣೆಗೊಳಗಾದ ಬದುಕಿಗೆ ಒಂದು ಪ್ರಮುಖ ದನಿಯಾಯಿತು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ದಲಿತ ಬಂಡಾಯ ಸಾಹಿತ್ಯ ಒಂದು ಮಹತ್ವದ ಮುಜಲು. ಕನ್ನಡ ನವ್ಯ ಸಾಹಿತ್ಯ 1950ರ ಅನಂತರ ಆರಂಭವಾಗಿ 1970ನೇ ದಶಕದ ಮೊದಲ ಭಾಗದವರೆಗೆ ತುಂಬಾ ಸತ್ವಪೂರ್ಣವಾಗಿತ್ತು. ಆದರ ಕೊನೆ ಕೊನೆಗೆ ಈ ಸಾಹಿತ್ಯ ಪಂಥವೂ ತನ್ನೆಲ್ಲಾ ಸಾಧ್ಯತೆಗಳನ್ನು ತೀರಿಸಿಕೊಂಡು ಜಡವಾದಾಗ ದಲಿತ ಬಂಡಾಯ ಸಾಹಿತ್ಯವು ರೂಪು ತಳೆಯುವುದು ಅನಿವಾರ್ಯವಾಯಿತು. ಆ ಹೊತ್ತಿಗೆ ಮಾಕರ್್ಸ, ಲೆನಿನ್, ಅಂಬೇಡ್ಕರ್, ಲೋಹಿಯಾ, ಪೆರಿಯರ್, ಜಯಪ್ರಕಾಶ ನಾರಾಯಣ ಮೊದಲಾದವರು ವಿಚಾರ ಧಾರೆಗಳೂ, ತುಂಬ ಮಹತ್ವದ ಪ್ರೇರಣೆಗಳನಿಟ್ಟವು.

1979ರಲ್ಲಿ ಧರ್ಮಸ್ಥಳದಲ್ಲಿ ನಡೆದ 51ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ದಲಿತ ಬಂಡಾಯ ಸಾಹಿತ್ಯ ಘೋಷ್ಟಿಯನ್ನಿಡಲು ತಿರಸ್ಕರಿಸಿದಾಗ ದಲಿತ ಬಂಡಾಯ ಸಂವೇದನೆಯ ಪ್ರಮುಖ ಲೇಖಕರು ಬೆಂಗಳೂರಿನಲ್ಲಿ ಬಂಡಾಯ ಸಾಹಿತ್ಯ ಸಮ್ಮೇಳನ ನಡೆಸಿದರು. ಅನಂತರ ದಲಿತ ಬಂಡಾಯ ವೇದಿಕೆ ಅಧಿಕೃತವಾಗಿ ಉದ್ಘಾಟನೆಗೊಂಡು ಆ ಹೊತ್ತಿನಿಂದಲೇ ಗುರುತಿಸಿಕೊಂಡಿತು. ಹೀಗೆ ದಲಿತ ಬಂಡಾಯ ಸಾಹಿತ್ಯವು ವ್ಯವಸ್ಥೆ ವಿರುದ್ಧ ಸಿಟ್ಟು, ರೊಚ್ಚು, ಪ್ರತಿಭಟನೆಯಿಂದ ಕಟುವಾಸ್ತವತೆಯಿಂದ ಸಾಹಿತ್ಯವನ್ನು ರಚಿಸುವುದು ಮಾಡಿದರು. ಅಂತೆಯೆ ಆ ಹಿನ್ನೆಲೆಯಲ್ಲಿ ಸಾಹಿತ್ಯದ ಎಲ್ಲ ಪ್ರಕಾರದಲ್ಲೂ ಸತ್ವಪೂರ್ಣವಾದ ಕೃತಿಗಳನ್ನು ನೀಡುವ ಮೂಲಕ ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ಆಯಾಮವನ್ನು ನೀಡಿತು.

## -: ಪರಾಮರ್ಶನ ಗ್ರಂಥಗಳು :-


- ಹೊಸಗನ್ನಡ ಸಾಹಿತ್ಯ - ಎಲ್.ಎಸ್. ಶೇಷಗಿರಿ ರಾವ್.
- ನವ್ಯತೆ ಮತ್ತು ಕಾವ್ಯ ಜೀವನ - ವಿ. ಕೃ. ಗೋಕಾಕ್.
- ಕನ್ನಡ ಸಾಹಿತ್ಯ ಪುನರ್ ಮೌಲ್ವೀಕರಣ - ಸಂ. ಬರಗೂರುರಾಮಚಂದ್ರಪ್ಪ, ಸಾಹಿತ್ಯ ಅಕಾಡೆಮಿ, ಸಂಚಿಕೆ 1 ರಿಂದ 12 ರವರೆಗೆ,
- ಬಡಾಯ ದಲಿತ - ಲೇ. ಪುರುಷೋತ್ತಮ ಬಿಳಿಮಲೆ.